# ಸಖೀಕರ್ಮಗಳು – ಆದರ್ಶ ಸಖಿ ಚಿತ್ರಲೇಖೆ

## –ದೀಪ್ತಿಶ್ರೀ ಭಟ್ ಬೆಂಗಳೂರು

**<u>ಅರಿಕೆ</u>**

ಭರತನಾಟ್ಯದಲ್ಲಿ M.A ಮಾಡುತ್ತಿದ್ದಾಗ ಡಾ. ದ್ವರಿತ ವಿಶ್ವನಾಥ ಅವರು ನೀಡಿದ ಅತ್ಯುತ್ತಮ ಮಾರ್ಗದರ್ಶನ ಇಂದು ವಿವಿಧ ದಿಕ್ಕುಗಳಲ್ಲಿ ಸಂಶೋಧನೆ ಕೈಗೊಳ್ಳಲು ಮನಸ್ಸನ್ನು ಪ್ರೇರೇಪಿಸುತ್ತಿದೆ. ನನ್ನ ಎಲ್ಲ ಗುರುಗಳನ್ನೂ ಹಾಗೂ ಪೋಷಕರನ್ನೂ ಈ ಸಂದರ್ಭದಲ್ಲಿ ಸ್ಮರಿಸಲು ಇಚ್ಛಿಸುತ್ತೇನೆ.

**ಸಂಶೋಧನಾ ವಿಧಾನ**

ಮೊದಲಿಗೆ ಶೃಂಗಾರ ಮಂಜರಿ, ರಸಮಂಜರಿ, ಶೃಂಗಾರ ತಿಲಕ, ದಶರೂಪಕ ಇತ್ಯಾದಿ ಗ್ರಂಥಗಳಲ್ಲಿ ವಿವರಿಸಿರುವ ಸಖೀ ಲಕ್ಷಣಗಳನ್ನು ವಿವಿಧ ಪುಸ್ತಕಗಳಿಂದ ಸಂಗ್ರಹಿಸಲಾಯಿತು. ಅನಂತರ ಕನಕದಾಸರ ಮೋಹನತರಂಗಿಣಿಯಲ್ಲಿ ಉಲ್ಲೇಖಿತವಾದ ಚಿತ್ರಲೇಖೆಯ ಕೃತ್ಯಗಳ ಮೂಲಕ ಸಖೀ ಲಕ್ಷಣಗಳನ್ನು ವಿವರಿಸುವ ಪ್ರಯತ್ನವನ್ನು ಮಾಡಲಾಗಿದೆ.

# ಆದರ್ಶ ಸಖಿ ಚಿತ್ರಲೇಖೆ

ನೂಪುರ ಭ್ರಮರಿ ಪತ್ರಿಕೆಯಿಂದ ಪ್ರಕಟಣೆ- ಲೇಖನದ ಹಕ್ಕುಗಳು ಲೇಖಕರದ್ದು. ಮಾಹಿತಿ ನಕಲಿಸುವುದನ್ನು ನಿರ್ಬಂಧಿಸಲಾಗಿದೆ.

ಬೇಡುವ ಕೈಗಳಿಗಿಂತ ನೀಡುವ ಕೈಗಳು ಉತ್ತಮವಂತೆ. ಕಷ್ಟ-ಕಾರ್ಪಣ್ಯಗಳಿಂದ ತೊಳಲಾಡುತ್ತಿರುವಾಗ, "ಸಾಂತ್ವನ" ನೆಮ್ಮದಿ ನೀಡುತ್ತದಾದರೂ ಆ ಕಷ್ಟವನ್ನೇ ಇಲ್ಲದಂತಾಗಿಸುವ ವ್ಯಕ್ತಿತ್ವ ಶ್ರೇಷ್ಠವೆನಿಸುತ್ತದೆ. ಉಷಾ ಪರಿಣಯದಲ್ಲಿ ಬರುವ ಚಿತ್ರಲೇಖೆಯ ವ್ಯಕ್ತಿತ್ವವು ಅಂತಹ ಮೇರು ಮಟ್ಟದ್ದಾಗಿದೆ. ಇದ್ದರೆ ಇಂತಹ ಸಖಿ ಇರಬೇಕು ಎಂಬುವುದು ಆಕೆಯ ಸಾಧನೆಗಳನ್ನು ಕೇಳಿದ ಪ್ರತಿಯೊಂದು ವಿರಹಿಣಿ ನಾಯಿಕೆಯ ಮನೋಭಿಲಾಷೆ ಎಂದರೆ ಅತಿಶಯೋಕ್ತಿಯಲ್ಲ. ಕನಕದಾಸರ ಮೋಹನ ತರಂಗಿಣಿಯನ್ನು ಆಧಾರವಾಗಿಟ್ಟುಕೊಂಡು ಉಷಾಳ (ಶ್ರೀ ಕೃಷ್ಣನ ಮೊಮ್ಮಗ ಅನಿರುದ್ಧನ ಪ್ರಿಯೆ) ಸಖಿ ಚಿತ್ರಲೇಖೆಯ ಗುಣ ಕಥನ ಹಾಗೂ ಸಾಂಪ್ರದಾಯಿಕ ಶೃಂಗಾರ ಗ್ರಂಥಗಳಲ್ಲಿ ವರ್ಣಿಸಿರುವ ಸಖೀ ಕಲ್ಪನೆಯನ್ನು ಚಿತ್ರಲೇಖೆಯ ಕೃತ್ಯಗಳ ಮೂಲಕ ವಿವರಿಸುವ ಪ್ರಯತ್ನವೇ ಈ ಲೇಖನ.

## 1. ವಿವಿಧ ಆಧಾರಗಳ ಮೇಲೆ ಸಖೀ ವರ್ಗೀಕರಣ

### ಅ) ಸಖಿಯ ವರ್ತನೆಯ ಆಧಾರದ ಮೇಲೆ ಮಾಡಬಹುದಾದ ವರ್ಗೀಕರಣ

ಶೃಂಗಾರ ಮಂಜರಿಯಲ್ಲಿ ಬರುವ ಉತ್ತಮ, ಮಧ್ಯಮ ಮತ್ತು ಅಧಮ ಸಖೀ ಎಂಬ ವರ್ಗೀಕರಣದಲ್ಲಿ ಚಿತ್ರಲೇಖೆ ಯಾವತ್ತೂ ಉತ್ತಮ ಸಖೀ ಎನಿಸಿಕೊಳ್ಳುತ್ತಾಳೆ. ಈಕೆ ಎಂತಹ ಸಂದರ್ಭದಲ್ಲೂ ಉಷೆಯ ಮೇಲೆ ಕೋಪಮಾಡಿಕೊಳ್ಳುವುದಿಲ್ಲ. ಅದಕ್ಕೆ ಕಾರಣ ಉಷೆ ಎಂದಿಗೂ ಆಕೆಯ ಮಾತು ಮೀರಿರಲಿಲ್ಲ. ಒಂದು ವೇಳೆ ಮಾತು ಮೀರಿದ್ದರೆ ಮಧ್ಯಮ ಅಥವಾ ಅಧಮ ಸಖಿಯಾಗುತ್ತಿದ್ದಳೋ ಏನೋ. ಈ ಕೆಳಗೆ ಕೊಟ್ಟಿರುವ ಕಾವ್ಯದ ತುಣುಕುಗಳೇ ಇದಕ್ಕೆ ಸಾಕ್ಷಿ.

ಉಷಾ :
ಹುಟ್ಟಿ ಬುದ್ಧಿಗಲಿತ ಮೇಲೆ ನಿನ್ನಾಜ್ಞೆಯ
ಕಟ್ಟಿನೊಳಿಹೆನೆಂದೆನುತ
ನಿಟ್ಟಿಸಿ ನವರತ್ನಭೂಷಣಂಗಳ ಹೊನ್ನ
ಪೆಟ್ಟಿಗೆಯೊಳಿರಿಸಿದಳು (೩೫, ಪುಟ ೪೬೦)

ಚಿತ್ರಲೇಖೆ:
ಮದಸೊಕ್ಕಿದಾನೆ ಮಾವುತನಿಚ್ಛೆಯಿದ್ದಂತೆ
ಸುದತಿ ನೀನೆನ್ನಾಜ್ಞೆಯಲಿ

ಪದ ತಪ್ಪದಿರ್ಪ ಕಾರಣ ನಿನ್ನ ಸೇವೆಗಾ
ನೊದಗಿದೆ ಕೇಳಾಯತಾಕ್ಷಿ (೩೬, ಪುಟ ೪೬೦)

"ನೀನು ನನ್ನ ಆಜ್ಞೆಯನ್ನು ಮೀರಿ ವರ್ತಿಸದಿರುವ ಕಾರಣದಿಂದ ನಾನು ನಿನ್ನ ಸೇವಕಿಯಾಗಿದ್ದೇನೆ" ಎಂಬ ಚಿತ್ರಲೇಖೆಯ ಮಾತುಗಳಿಂದ, ಉಷಾ "ಸಖೀ ಅಧೀನ ನಾಯಿಕಾ" ಎಂಬುದು ಸ್ಪಷ್ಟವಾಗುತ್ತದೆ.

**ಆ) ವಯಸ್ಸಿನ ಆಧಾರದ ಮೇಲೆ ಮಾಡಬಹುದಾದ ವರ್ಗೀಕರಣ**

ಸರಸ್ವತಿ ಕಂಠಾಭರಣದ ಪ್ರಕಾರ, ಚಿತ್ರಲೇಖೆ "ಪೂರ್ವಜಾ ಸಖೀ" ಎನಿಸಿಕೊಳ್ಳುತ್ತಾಳೆ. ಆಕೆ ಉಷೆಗಿಂತ ಹಿರಿಯಳು ಎನ್ನುವುಳಕ್ಕೆ ಅನೇಕ ದೃಷ್ಟಾಂತಗಳು ದೊರಕುತ್ತವೆ.

ಉಷಾ :
ಅಕ್ಕ ನೀನನಗೋಸ್ಕರ ಮೂಜಗವನು
ತುಕ್ಕಬೇಹುದು ರಾತ್ರಿಯಲಿ
ರಕ್ಕಸ ಭೂತ ಭೇತಾಳ ಶಂಕೆಯ ವಿಜ
ಯಕ್ಕೇನಾ ನೆಗಳುವೆ ಪೇಳು (೩೫, ಪುಟ ೪೮೯)

"ಅಕ್ಕ ನೀ ನನಗೋಸ್ಕರ ಮೂರು ಲೋಕಗಳನ್ನು ಸುತ್ತಬೇಕು" ಎಂಬ ಮಾತಿನಿಂದ ಚಿತ್ರಲೇಖೆ ಉಷೆಗಿಂತ ಹಿರಿಯಳು ಎಂಬುದು ಸಾಬೀತಾಗುತ್ತದೆ.

ಅನಿರುದ್ಧನು ಚಿತ್ರಲೇಖೆಯನ್ನು ಕುರಿತು:
ಪಿರಿಯತ್ತಿಗೆ ಕೇಳ್ನನ್ನ ನೀ ಪೆತ್ತವಳೆ
ಸರಿಯೆಂದು ಸರಸವಾಕ್ಯದಿ
ಸಿರಿಗೈಯ ತನ್ನ ಹಣೆಗೊತ್ತಿಕೊಂಡು ತಾ
ತ್ವರಿಯದಿ ಕೀರ್ತನೆಗೆಯ್ದನು (೫೩, ಪುಟ ೫೫೦)

ಅನಿರುದ್ಧನಾಡಿದ "ಹಿರಿಯ ಅತ್ತಿಗೆ, ನೀನು ನನ್ನ ಹೆತ್ತವಳೆಂದರೆ ಸರಿ" ಎಂಬ ಮಾತುಗಳು, ಚಿತ್ರಲೇಖೆಯು ಅನಿರುದ್ಧನಿಗೂ ಹಿರಿಯಳು ಎಂಬುದನ್ನು ಸ್ಪಷ್ಟೀಕರಿಸುತ್ತದೆ.

**ಇ) ಸಖಿಯ ವೃತ್ತಿಯನ್ನು ಆಧರಿಸಿ ಮಾಡಬಹುದಾದ ವರ್ಗೀಕರಣ**

ರುದ್ರಭಟ್ಟನ ಶೃಂಗಾರ ತಿಲಕದಲ್ಲಿ ವ್ಯಾಖ್ಯಾನಿಸಿರುವ, ದಾಸಿ, ನಟಿ, ಧಾತ್ರಿ, ಪ್ರತಿವೇಶ್ಯ, ಶಿಲ್ಪಿನಿ, ಬಾಲಾ, ಪ್ರತಿವ್ರಜಿತಾ, ಕಾರು - ಇವಾವ ವರ್ಗೀಕರಣದಲ್ಲೂ ಚಿತ್ರಲೇಖೆಯನ್ನು ಜೋಡಿಸಲಾಗುವುದಿಲ್ಲ.

ಧನಂಜಯನ ದಶರೂಪಕದಲ್ಲಿ ಹೇಳಿರುವಂತೆ, ನಾಯಿಕೆಯ ಸಹಾಯಕರಲ್ಲಿ ಚಿತ್ರಲೇಖೆಯು ಉಷೆಯ ಸಖೀ ಎಂಬ ಸ್ಥಾನವನ್ನು ಸಮರ್ಪಕವಾಗಿ ತುಂಬುತ್ತಾಳೆ. (ದಾಸಿ, ಸಖೀ, ಕಾರು, ಧಾತ್ರೇಯೀ, ಪ್ರತಿವೇಶಿಕಾ, ಲಿಂಗಿನೀ, ಶಿಲ್ಪಿನೀ, ದೂತೀ - ಇವೇ ದಶರೂಪಕದಲ್ಲಿ ವಿವರಿಸಿರಿವ ನಾಯಿಕಾ ಸಹಾಯಕರ ವರ್ಗೀಕರಣ).

**ಈ) ಸಖಿಯ ನಡವಳಿಕೆಯ ಆಧಾರದ ಮೇಲೆ ಮಾಡಬಹುದಾದ ವರ್ಗೀಕರಣ**

ತೋಷನ ಸುಧಾನಿಧಿಯಲ್ಲಿ ಹೇಳಿರುವ ನಾಲ್ಕು ರೀತಿಯ ಸಖಿಯ ಪಾತ್ರವನ್ನೂ ಚಿತ್ರಲೇಖೆ ತುಂಬುತ್ತಾಳೆ.

i) ಹಿತಕಾರಿಣಿ (ಯಾವತ್ತೂ ಸಖಿಯ ಒಳಿತನ್ನು ಬಯಸುವವಳು) :

ಉಷೆಗಾಗಿ ಮೂರು ಲೋಕಗಳನ್ನು ಸುತ್ತಿ ಸುರಾಸುರ ದೇವಮಾನವರ ಚಿತ್ರಗಳನ್ನು ತಂದಿದ್ದು, ಅನಿರುದ್ಧನನ್ನೇ ಹೊತ್ತುತಂದು ಉಷಾನಿರುದ್ಧರ ಸಮ್ಮಿಲನಕ್ಕೆ ಸುವ್ಯವಸ್ಥಿತ ರೀತಿಯಲ್ಲಿ ಸಕಲ ಸಿದ್ಧತೆಗಳನ್ನು ಮಾಡಿಸಿದ ಪ್ರಕರಣಗಳೇ ನಿರ್ವಚನ.

ii) ಅಂತರ್ಭರ್ತಿನಿ (ಸಖಿಯ ಸಂಪೂರ್ಣ ನಂಬಿಗಸ್ಥ ಹಾಗೂ ಒಳಗುಟ್ಟನ್ನು ತಿಳಿದವಳು):

ಉಷಾ:
ಎಂತಾದೊಡೆನ್ನಬಹುದು ಕೇಳು ಮಾತ್ಪ್ರಾಣ
ಕಾಂತಾ ನಮ್ಮಿರ್ವರಿಚ್ಛೆಯನು
ಸಂತತ ಸಲಿಸಿದಳು ತಾಯಾಗಿ ಕೆಳದಿಯ
ಚಿಂತಾಮಣಿಯೆಂದಳವಳು (೪೧, ಪುಟ ೫೪೭)

"ನಮ್ಮಿಬ್ಬರ ಇಚ್ಛೆಯನ್ನು ಸತತವಾಗಿ ತಾಯಾಗಿ ಸಲ್ಲಿಸುತ್ತಾ ಬಂದಳು. ಆ ನನ್ನ ಕೆಳದಿಯನ್ನು ಬಯಕೆ ಸಲ್ಲಿಸುವ ದೇವಲೋಕದ ರತ್ನವೆನ್ನಬಹುದು" ಎಂಬ ಮಾತುಗಳೇ ಚಿತ್ರಲೇಖೆಯನ್ನು ಅಂತರ್ಭರ್ತಿನಿ ಎಂದು ಸಾರಿ ಹೇಳುತ್ತವೆ.

iii) ವಿದಗ್ಧ (ತನ್ನ ಜಾಣತನದಿಂದ ಕಾರ್ಯ ಸಿದ್ಧಿಸಿಕೊಳ್ಳುವವಳು):

ತನ್ನ ಮಾಯಾವಿದ್ಯೆಯಿಂದ ಚಿತ್ರಪಟ ತರಲು ಹೊರಟ ಚಿತ್ರಲೇಖೆಯ ಸಾಹಸವನ್ನು ಕನಕದಾಸರು ಈರೀತಿ ವರ್ಣಿಸಿದ್ದಾರೆ.
ಎವೆಯಿಟ್ಟು ಕಣ್ಮುಚ್ಚಿದಂತೆ ಮೂಲೋಕಕೆ
ಜವೆಯ ಮೋಹವ ಕವಿಸಿದಳು
ಸವೆಯದ ಕಾರ್ಗತ್ತಲೆಯ ತುಂಬಿದಳು ಹು
ಣ್ಣಿಮೆಯ ಬೆಳ್ದಿಂಗಳ ಕಿಡಿಸಿ (೮, ಪುಟ ೪೯೪)

ಇನ್ನು ಅನಿರುದ್ಧನಿಗೆ ಬಾಣಾಜೆಯ ಪರಿಚಯ ಹೇಳಿ ಅವನನ್ನು ನಂಬಿಸಿ ಕರೆತಂದ ಘಟನೆಯೇ ಆಕೆಯ ಚಾಣಾಕ್ಷತನಕ್ಕೆ ಹಿಡಿದ ಕೈಗನ್ನಡಿ.

ಬಾಣಾಜೆ ನಿನ್ನ ಮೆಚ್ಚಿದಳಾಯಕನಿಗೆ
ಪ್ರಾಣ ಸ್ನೇಹಿತೆ ನಾನು, ನೀನು
ಕಾಣಲೊಸುಗ ಚಿತ್ರಪಟವ ತಂದೆನು ಸುಪ್ರ
ವೀಣ ನೋಡೆಂದು ತೋರಿದಳು (೨೧, ಪುಟ ೫೨೫)

iv) ಸಂಚಾರಿ(ನಾಯಿಕೆಯ ಜೊತೆಯಲ್ಲೇ ಸದಾ ಇರುವವಳು) :
ಉಷಾದೇವಿ ಶಿವ-ಪಾರ್ವತಿ ದರ್ಶನಕ್ಕೆ ಹೊರಟಾಗಲೂ, ಚಿತ್ರಲೇಖೆ ಅವಳ ನೆರಳಂತಿದ್ದಳು. ಕೆಳಗಿನ ಸಾಲುಗಳೇ ಅದಕ್ಕೆ ದೃಷ್ಟಾಂತ.

ಹತ್ತಿದರೋರ್ವರೊಂದೊಂದು ಪಲ್ಲಕ್ಕಿಯ
ಮುತ್ತಿನ ಕುಚ್ಚುಗಳು ಮೇರೆಯೆ
ಸತ್ತಿಗೆ ಶತಸಾವಿರ ಲಕ್ಷ ಕೋಟಿ ಮೇ
ಲೆತ್ತಿದುವಿನನ ಮಂಡಲಕೆ (೫, ಪುಟ ೪೨೦)

**ಉ) ಸಖಿಯು ನಾಯಿಕ-ನಾಯಕರಲ್ಲಿ ಯಾರ ಪರ ಎಂಬುವುದರ ಆಧಾರದ ಮೇಲೆ ಮಾಡಬಹುದಾದ ವರ್ಗೀಕರಣ**
ದಾಸನ ಶೃಂಗಾರ ನಿರ್ಣಯದ ಪ್ರಕಾರ ಈಕೆ ನಾಯಿಕಾಹಿತ ಹಾಗೂ ನಾಯಕಾಹಿತ ಎರಡೂ ಆಗಿರುತ್ತಾಳೆ. ಆದರೆ ಉಷೆಯ ಪ್ರಾಣಸ್ನೇಹಿತೆಯಾದ್ದರಿಂದ ಈಕೆ ಉಷೆಯ ಪರ ಎಂದರೆ ತಪ್ಪಲ್ಲ.

i) ನಾಯಿಕಾಹಿತ(ನಾಯಿಕೆಗೆ ಒಳಿತನ್ನು ಬಯಸುವವಳು):

ಪ್ರಣಯೋತ್ಕಂಠಿತಳಾಗಿ ಉಷಾದೇವಿ ವ್ಯಥೆಪಡುತ್ತಿರಲು, ಅದನ್ನು ಕಂಡು ದುಃಖಿತಪ್ತಳಾದ ಚಿತ್ರಲೇಖೆ ಸೂರ್ಯನನ್ನು ದೂಷಿಸುವ ಪರಿ ಗಮನಾರ್ಹವಾದುದು.

ಹಸಗೆಟ್ಟವೋ ಗಾಲಿ ಎರೆಯೆಣ್ಣೆ ತೀರ್ದುದೊ
ಅಸಮಾಶ್ವಾಗಳು ಬಾಂದೊರೆಯ
ಕೆಸರೊಳು ಬಿದ್ದೇಳಲಾರದಾದವೋ ಎಂದು
ಬಿಸಜಾಕ್ಷಿ ರವಿಯ ನೋಡಿದಳು (೧೯, ಪುಟ ೪೬೭)

ಚಕ್ರಗಳು ಹಸಗೆಟ್ಟವೋ, ಚಕ್ರಗಳ ಗುಂಭಕ್ಕೆ ಇಟ್ಟ ಎರೆಯೆಣ್ಣೆ ತೀರಿಹೋಯಿತೋ, ಅಸಮಾಶ್ವಾಗಳು (ಸೂರ್ಯನ ರಥದ ಏಳು ಕುದುರೆಗಳು) ಆಕಾಶಗಂಗೆಯ ಕೆಸರೊಳಗೆ ಬಿದ್ದು ಏಳಲಾರದಾದವೋ ಎಂದು ಕಮಲಾಕ್ಷಿ ಸೂರ್ಯನನ್ನು ನೋಡಿದಳು.

ii) ನಾಯಕಾಹಿತ(ನಾಯಕನಿಗೆ ಒಳಿತನ್ನು ಬಯಸುವವಳು) :
ಚಿತ್ರಲೇಖೆಯ ಸಹಾಯದಿಂದ ಸಂತುಷ್ಟನಾದ ಅನಿರುದ್ಧನಾಡಿದ ಮಾತುಗಳೇ ಇದಕ್ಕೆ ಸಾಕ್ಷಿ.

ಅತ್ತಿಗೆಯವುದಕ್ಕನಹುದು ತಾಯಹುದಸು
ಗುತ್ತುಗೆಗಾತಿ ನೀನಹುದು
ಪತ್ತಿಗೆ ಪರಮಾನುಕೂಲೆ ನೀನೆಂದು ಕೈ
ಯೆತ್ತಿ ಕೊಂಡಾಡಿದ ಕುವರ (೫೭, ಪುಟ ೫೩೪)

## 2. ಸಖೀ ಕರ್ಮಗಳು

ಶೃಂಗಾರ ಮಂಜರಿಯಲ್ಲಿ ಎಲ್ಲೇಖಿತವಾದ ಸಖೀ ಕರ್ಮಗಳಾದ ಮಂಡನ, ಉಪಾಲಂಭಾದಿಗಳಲ್ಲಿ ಶಿಕ್ಷಾ, ಪ್ರಶಂಸಾ, ವಿರಹಾಶ್ವಾಸ, ಆಶಾಯ-ಪ್ರಶ್ನಾಗಳಿಗೆ ಉದಾಹರಣೆಗಳು ಹೇರಳವಾಗಿ ದೊರಕುತ್ತವೆ. ಸಖೀ ಕರ್ಮಗಳನ್ನು ಚಿತ್ರಲೇಖೆ ಹೇಗೆ ನಿಭಾಯಿಸಿದಳೆನ್ನುವುದನ್ನು ತಕ್ಕ ವಿವರಣೆಗಳೊಂದಿಗೆ ಈ ಕೆಳಗಿನಂತೆ ಸ್ಪಷ್ಟೀಕರಿಸಬಹುದುದು.

##### ೧. ಶೃಂಗಾರ ಮಂಜರಿಯಲ್ಲಿ ವ್ಯಾಖ್ಯಾನಿಸಿರುವ ಸಖೀ ಕರ್ಮಗಳು

#### ಅ) ಮಂಡನ(ಸಖಿಯನ್ನು ಅಲಂಕರಿಸುವುದು):
ಚಿತ್ರಲೇಖೆಯು ಉಷೆಯನ್ನು ಸಿಂಗರಿಸಿದಳೆನ್ನುವುದನ್ನು ಯಾವುದೇ ಕಾವ್ಯವಾಕ್ಯ ಸ್ಪಷ್ಟೀಕರಿಸುವುದಿಲ್ಲ. ಈ ಕಾವ್ಯದಲ್ಲಿ "ಉಷಾದೇವಿಯ ಶೃಂಗಾರ" ಎಂಬ ಒಂದು ಅಧ್ಯಾಯವಿದೆ. ಅದರಲ್ಲಿ ಸಖಿಯರು ಸೇರಿ ಉಷಾ ಹಾಗೂ ಚಿತ್ರಲೇಖೆಯನ್ನು ಸಿಂಗರಿಸಿದರು ಎನ್ನಲಾಗುತ್ತದೆ.

ಆಕೆಯ ರೂಪಂಗೆ ಪ್ರತಿರೂಪವೆನೆ ಚಿತ್ರ
ಲೇಖೆಯ ಸಿಂಗರಗೈದರು
ಈಕೆಯ ಕೊಂಡಾಡುವವೊಡೊಂದು ನಾಲಗೆ
ಸಾಕೆನಿಸದು ಸತ್ಕವಿಗೆ (೫೨, ಪುಟ ೪೧೬)

#### ಆ) ಶಿಕ್ಷಾ (ಶಿಕ್ಷಣ ನೀಡುವುದು):
ಉಷೆಗೆ ಪಾರ್ವತಿಯ ವರದಂತೆ ಆಕೆಯ ಪ್ರಿಯತಮನು ಕನಸಿನಲ್ಲಿ ಬರುವ ದಿನ ಕೂಡಿ ಬರಲು, ಮಲಗುವ ಮುನ್ನ ಚಿತ್ರಲೇಖೆ ಆಕೆಗೆ ಹೀಗೆನ್ನುತ್ತಾಳೆ.

ಹಾಡಿಸಬೇಡ ನಾನಾ ವಾದ್ಯಗಳ ದನಿ
ಮಾಡಿಸಬೇಡೊರ್ವರೊಡನೆ

ಕ್ರೀಡಿಸಬೇಡ ಸ್ವಸ್ಥಡಿ ನಿದ್ದೆಗೆಯ್ವುದೆಂ
ದಾಡಿದಳಾ ಚಿತ್ರಲೇಖೆ (೩೬, ಪುಟ ೪೭೧)

**ಇ) ಪರಿಹಾಸ (ತಮಾಷೆ ಮಾಡುವುದು):**

ಬಹಳಷ್ಟು ದೇವಮಾನವರ ಚಿತ್ರಪಟಗಳನ್ನು ನೋಡಿ, ತನ್ನಿನಿಯನನ್ನು ಕಾಣದೆ ಆಯಾಸಗೊಂಡ ಉಷೆಗೆ, ಚಿತ್ರಲೇಖೆ ಎನ್ನುತ್ತಾಳೆ,

ತಂಗಿ ನೀಕೇಳು ಸಮಸ್ತ  ಚಿತ್ರಂಗಳ
ಭಂಗಿಸಿ ಬಿಟ್ಟೆ ನಿನ್ನೆದೆಯ
ಅಂಗೀಕೃತ ಪ್ರಾಣಕಾಂತನಾರೆಂದು ಪ್ರ
ಸಂಗಿಸಿದಳು ನಸುನಗುತ (೨೦, ಪುಟ ೫೧೩)

**ಈ) ಪ್ರಶಂಸಾ  (ಹೊಗಳುವುವದು):**

ಶಿವದರ್ಶನದಿಂದ ಮರಳಿ ಆಸ್ಥಾನಕ್ಕೆ ಬಂದಾಗ ಚಿತ್ರಲೇಖೆಯು ಉಷೆಯನ್ನು ಕುರಿತು, "ಹಣೆಗಣ್ಣನ ಆಸ್ಥಾನದಲ್ಲಿ ಸುರಸ್ತ್ರೀಯರು ತುಂಬಿ ತುಳುಕುತ್ತಿದ್ದರೂ ನಿನ್ನ ಚೆಲುವಿನ ಮೆರಗನ್ನ ಕಾಣಲಿಲ್ಲ" ಎನ್ನುತ್ತಾಳೆ.

ಕಿಡಿಗಣ್ಣನೊಡ್ಡೋಲಗದಲಿ ಸುರವೆಣ್ಣ
ಳಿಡಿಕಿರಿದಿಹುದು ನಿನ್ನೊರೆಗೆ
ಪಾಡಿಗಾಣೆವೆಂದು ಬಿನ್ನೈಸಲು ಸಖಿಯೊಡನೆ
ನುಡಿದಳಂಬುಜನೇತ್ರೆ ನಗುತ (೧೮, ಪುಟ ೪೫೫)

**ಉ) ವಿನೋದ (ಮನರಂಜನೆ):**

ಉಷಾ ಹಾಗೂ ಚಿತ್ರಲೇಖೆಯರಿಗಾಗಿ ಸಖಿಯರು ಗೀತಾ-ನೃತ್ಯಗಳಿಂದ ಮನರಂಜಿಸಿದರು ಎಂಬುವುದಕ್ಕೆ ಸಾಕಷ್ಟು ಉದಾಹರಣೆಗಳಿವೆ. ಉಷಾ ಹಾಗೂ ಚಿತ್ರಲೇಖೆ ಒಟ್ಟಾಗಿಕುಳಿತು ಗೀತವಾದ್ಯಗಳನ್ನು ವೀಕ್ಷಿಸಿದರು ಎಂಬುವುದಕ್ಕೂ ದೃಷ್ಟಾಂತಗಳಿವೆ.

ಗೀತವಾದ್ಯ ನೃತ್ಯ ನಾನಾ ಖೇಲನ ವಿಪ
ರೀತ ಮಾಯಾ ವಿದ್ಯೆಗಳ
ವ್ರಾತವನೊಂದೊಂದ ನೋಡಿ ಸಂತಸಗೊಂಡ
ರಾ ತರಳಾಯತಾಕ್ಷಿಯರು (೩೯, ಪುಟ ೪೬೧)

ಆದರೆ ಚಿತ್ರಲೇಖೆಯೇ ಖುದ್ದಾಗಿ ಉಷೆಯನ್ನು ರಂಜಿಸಿದಳೆಂಬುವುದಕ್ಕೆ ಉದಾಹರಣೆಗಳಿಲ್ಲ. ತಾಯಿ ಸ್ಥಾನದಲ್ಲಿ ನಿಂತು ಆಕೆಯ ಸುಖಕ್ಕೆ ಬೇಕಾದ ಸಕಲ ಸಿದ್ಧತೆಗಳನ್ನು ಮಾಡುವ, ಉಷಾನಿರುದ್ಧರ ಏಕಾಂತವನ್ನು ಕಾಪಾಡುವ ಹಲವು ಜವಾಬ್ದಾರಿಗಳು ಚಿತ್ರಲೇಖೆಯಮೇಲಿತ್ತು.

**ಊ) ಅಶಾಯ-ಪ್ರಶ್ನಾ (ನಾಯಿಕೆಯ ಮನಸಿನ ಭಾವನೆಗಳನ್ನು ಪ್ರಶ್ನಿಸುವುದು ಮತ್ತು ಅವಳ ಮನೋದ್ವಂದ್ವಗಳನ್ನು ಆಲಿಸುವುದು):**

ಸಪ್ನಾದಲ್ಲಾದ ಸಂಭೋಗದಿಂದ ಮನೋವ್ಯಾಧಿಗೊಳಗಾದ ಉಷೆಯು ಚಿತ್ರಲೇಖೆಯನ್ನು ತಬ್ಬಿಕೊಂಡು ಮಲಗಲೆತ್ನಿಸುತ್ತಾಳೆ. ಆಗ ಚಿತ್ರಲೇಖೆಯು, "ನೀನಿಲ್ಲಿಗೇಕೆ ಬಂದೆ ನನ್ನ ಕಂದ? ಈ ಸುಡುವ ಜ್ವರಕ್ಕೆ ಕಾರಣ ಹೇಳು" ಎಂದು ಅಳತೊಡಗುತ್ತಾಳೆ.

ನಾಕೆಟ್ಟೇ ನನ್ನೊಡಲುರಿದುದು ನೀನಿಲ್ಲಿ
ಗೇಕೆದ್ದು ಬಂದೆ ನನಕಂದ
ಆ ಕಡು ಜ್ವರವೇನು ಕಾರಣ ಹೇಳೆಂದು

ಶೋಕಾಶ್ರುಗರೆದಳಕ್ಷಿಯಲಿ (೫೩, ಪುಟ ೪೭೬)

ನಿನ್ನ ಆಯಾಸ ಯಾವುದರಿಂದಿಲ್ಲವಾಗುವುದು? ನಾ ನಿನ್ನವನನ್ನು ತಂದುಕೊಡುತ್ತೇನೆ. ನೀನು ಮಾತಾಡು ಎಂದು ಚಿತ್ರಲೇಖೆ ಎನ್ನಲು, ಪ್ರತ್ಯುತ್ತರವಾಗಿ ಉಷೆಯು ಆತ ಮನ್ಮಥ ತದ್ರೂಪು. ಆತನನ್ನು ತಂದು ನನಗೆ ಸುಖನೀಡು ಎಂದು ವಿನಂತಿಸುತ್ತಾಳೆ.

ಏತರಿಂದ ಮಾಣ್ದಪುದು ನಿನ್ನಯಾಸ
ನಾ ತಂದುಕೊಡುವೆ ನಿನ್ನವನ
ಭೂತಳವ್ಯವಹಾರ ತೃಣವಾದುದೆನಗೆ ನೀ
ಮಾತಾಡು ಮಾನಿನಿ ರನ್ನೆ(೨೩, ಪುಟ ೪೮೬)

ಮಕರಧ್ವಜರೂಪನಾವ ರಾಯನ ಕುಮಾ
ರಕನೆಂದು ಪೆಸರು ಗೊತ್ತಿಲ್ಲ
ಮುಖ ಪರೀಕ್ಷೆಯ ಬಲ್ಲೆನಾತನ ತಂದೆನ್ನ
ಸುಖಬಡಿಸುವುದೆಂದಳೊಲಿದು (೨೬, ಪುಟ ೪೮೭)

ಕೊನೆಗೆ ನಿನ್ನಿನಿಯನ್ನನ್ನು ತರುವೆ ಎಂದು ಚಿತ್ರಲೇಖೆ ಹೊರಟಾಗ, ಉಷೆ ಚಡಪಡಿಸುವ ರೀತಿ ಗಮನಾರ್ಹ. "ನನ್ನ ಮನಸ್ಸು ನಿನ್ನ ಪ್ರಯಾಣದಿಂದ ದುಗುಡಗೊಂಡಿದೆ. ಈ ಗಳಿಗೆಯಲ್ಲಿ ಅಗಲಿದರೆ ಹೇಗೆ ಜೀವಿಸಲಿ ಎಂದು ದಿಗಿಲುಗೊಂಡು ಕಂಬನಿಗೆರೆಯುತ್ತಾ ನಿಟ್ಟುಸಿರುಬಿಟ್ಟಳು" ಎಂದು ಕಾವ್ಯದಲ್ಲಿ ವ್ಯಾಖ್ಯಾನಿಸಲಾಗಿದೆ.

ವಿಗಡವಾಗಿದೆ ನಿನ್ನ ಪಯಣಕ್ಕೆನ್ನೆದೆ
ದಿಗಿಲಾಂತುದೀ ಗಳಿಗೆಯೊಳು
ಅಗಲಿದೊಡೆಂತು ಜೀವಿಪೆನೆಂದು ಬಿಸಿಯುಸಿರ
ನುಗಿದಳು ಕಂಬನಿಗರೆದು (೪೦, ಪುಟ ೪೯೦)

ಪ್ರೋಷಿತ ಭರ್ತೃಕ ನಾಯಿಕೆಯರಲ್ಲಿ ಬರುವ ಸಖ್ಯಾನುಕಂಪಿತ ನಾಯಿಕೆಯನ್ನು ಮೇಲಿನ ಸಾಲುಗಳು ನೆನಪಿಸುತ್ತವೆ. ಪತಿಯೂ ಇರದೇ, ಸಾಂತ್ವನ ಹೇಳುವ ಸಖಿಯೂ ಇಲ್ಲವಾದರೆ ಹೀಗೆ ಬಾಳಲಿ ಎಂಬ ನಾಯಕಿಯ ಕೊರಗನ್ನು ಕಾಣಬಹುದು.

**ಋ) ವಿರಹಾಶ್ವಾಸ (ವಿರಹಿಣಿ ನಾಯಿಕೆಗೆ ಸಾಂತ್ವನ ನೀಡುವುದು):**
ಅಳುವ ಉಷೆಯನ್ನು ಚಿತ್ರಲೇಖೆ ಸಂತೈಸುವ ಪರಿ, ಒಬ್ಬ ತಾಯಿ ತನ್ನ ಹಸುಗೂಸನ್ನು ಓಲೈಸುವಂತಿದೆ.

ಅಳಬೇಡ ಬಾರೆನ್ನ ಕಂದಯೆಂದಮರ್ದಪ್ಪಿ
ಕೆಳದಿಯ ಮಾಣಿಕ ಮಂಚದಿ
ಕಳಹಂಸ ತುಪ್ಪುಳ ಮೃದುವಾಸೊಲೊರಗಿಸಿ
ಹೊಳೆವ ವಿಗ್ರಹವ ನೋಡಿದಳು (೧೦, ಪುಟ ೪೮೨)

**೨. ಶೃಂಗಾರ ಮಂಜರಿಯನ್ನು ಹೊರತುಪಡಿಸಿ ಉಳಿದ ಗ್ರಂಥಗಳಲ್ಲಿ ವ್ಯಾಖ್ಯಾನಿಸಿರುವ ಸಖೀ ಕರ್ಮಗಳು**
ಕೃಪಾರಾಮ ತನ್ನ ಹಿತತರಂಗಿಣಿಯಲ್ಲಿ ನಿರೀಕ್ಷಣಾ(ನಾಯಕ-ನಾಯಿಕಾರ ಸಂಭೋಗವನ್ನು ಹೊರಗಡೆಯಿಂದ ನಿರೀಕ್ಷಿಸುವುದು) ಎಂಬ ಕರ್ತವ್ಯವನ್ನು ನಿರೂಪಿಸುತ್ತಾನೆ. ಉಷಾನಿರುದ್ಧರನ್ನು ಒಗ್ಗೂಡಿಸಿದ ಚಿತ್ರಲೇಖೆಯು ಅವರ ಏಕಾಂತಕ್ಕೆ ಧಕ್ಕೆ ಬಾರದಂತೆ ಸಕಲ ಸಿದ್ಧತೆಗಳನ್ನು ಮಾಡಿಸಿ ಹೊರಗೆ ಕಾಯುತ್ತಿರುತ್ತಾಳೆ ಎಂಬುವುದನ್ನು ಈ ಕೆಳಗಿನ ಸಾಲುಗಳು ಸ್ಪಷ್ಟೀಕರಿಸುತ್ತವೆ.

ಮರೆಯದಷ್ಟಾವಧಾನದಿ ಮಂತ್ರಿನಂದನೆ
ಪೊರಾಗಿರಲ್ಮಂದಿರದೊಳಗೆ
ಬೆರಗಾ ಬಣ್ಣಿಸುತ ಕುಮಾರಿ ಕುಮಾರಕನ
ಸೆರಗ ಬಿಡೆಂದಳರ್ತಿಯಲಿ (೭, ಪುಟ ೫೩೭)

ರಸ-ವಿಲಾಸದಲ್ಲಿ ದೇವ ವ್ಯಾಖ್ಯಾನಿಸಿರುವ 'ಪರಸ್ಪರ-ದಿಖಾವಾನ' ದಾಸನ ಶೃಂಗಾರ ನಿರ್ಣಯದಲ್ಲಿ ಹೇಳಿರುವ 'ಸಂದರ್ಶನ'ವನ್ನು ಸಮೀಕರಿಸುತ್ತದೆ. ಒಬ್ಬರನ್ನು ಇನ್ನೊಬ್ಬರಿಗೆ ತೋರಿಸುವ ಕಾರ್ಯವನ್ನು ಚಿತ್ರಲೇಖೆ ನಿರ್ವಹಿಸಿದ ಪರಿ ಶ್ಲಾಘನೀಯ. ಈಗಾಗಲೇ ಹಲವಾರು ಉದಾಹರಣೆಗಳನ್ನು ಈ ಲೇಖನದಲ್ಲಿ ವಿವರಿಸಲಾಗಿದೆ.

**ಸಾರಾಂಶ**

ಹೀಗೆ ಸಖಿಯ ಕಣ್ಣೀರಿನ ಕಾಲುವೆಗೆ ತಮ್ಮ ಕಣ್ಣೀರಿನ ಕಾಲುವೆ ಹರಿಸಿ ಕಣ್ಣೀರ ನದಿಯಾಗಿಸಿ ಸಾಂತ್ವನ ನೀಡುವ ಸಖಿಯರು ಸಿಗಬಹುದು. ಆದರೆ ಕಣ್ಣೀರನ್ನೇ ಮಾಯವಾಗಿಸುವ ಜಾಣ, ಉದಾರ ಸಖೀ ಸಿಕ್ಕರೆ ಅದು ಜನ್ಮಜನ್ಮಾಂತರದ ಪುಣ್ಯವೇ ಸರಿ. ಇಂತಹ ಸಖೀ ಚಿತ್ರಲೇಖೆಯ ಉದಾತ್ತತೆ, ಸಾಹಸಗಳ ವರ್ಣನೆ ಹಾಗೂ ಶಾಸ್ತ್ರಗ್ರಂಥಗಳಲ್ಲಿ ಅವಳ ವ್ಯಕ್ತಿತ್ವದ ಸ್ಥಾನವನ್ನು ಪರಿಚಯಿಸುವ ಕಿರು ಪ್ರಯತ್ನ ಯಶಸ್ವಿಯಾಗಿದ್ದರೆ ಅದೇ ಈ ಲೇಖನದ ಸಾಫಲ್ಯ.

Bibilography:


1. ಸುಧಾಕರ, ಕನಕದಾಸರ ಕಾವ್ಯ ಭಾಗ - ೨ ಮೋಹನತರಂಗಿಣಿ (ಗದ್ಯಾನುವಾದದೊಂದಿಗೆ) - ಕನ್ನಡ ಮತ್ತು ಸಂಸ್ಕೃತಿ ಇಲಾಖೆ. ಕನಕ ಸಾಹಿತ್ಯ ದರ್ಶನ ಸಂಪುಟ ೩.

2. Gupta, Rakesh. *Studies in Nayaka-Nayika Bheda*. Eastern Book Linkers Delhi, 2013.

3. Raghavan, V. *Shringara-Mañjari of Saint Akbar Shah*. Hyderabad: Hyderabad Archaeological Department Publication, 1990.